ಅವರಿಗೆ ಪರನ್ಪರ ವರ್ಗಾವರ್ಗಿ ಇದೆ. ಅಂತಹವರನ್ನು ಈಗ ಸರ್ಕಾರದ ಉದ್ಯೋಗಸ್ಥರನ್ನಾಗಿ ಮಾಡಿದರೆ ಸರ್ಕಾರದ ನಿಯಮವಳಿಗನುಸಾರವಾಗಿ ಯಾವ್ಯಾವ ವರ್ಗಗಳಿಗೆ ಎಷ್ಟೆಷ್ಟು ಸೀನಿಯಾರಿಟಿ ಪ್ರಕಾರ ಪ್ರೊಮೋಷನ್ ಸಿಗಬೇಕೋ ಅಷ್ಟು ಸಿಗದೇ ಇರುವುದರಿಂದ ಅಂಥಾದ್ದನ್ನು ಸರಿ ಮಾಡುತ್ತೀರಾ ?

ಶ್ರೀ ಎ. ಆರ್. ಬದರೀನಾರಾಯಣ.—ಈಗ ಮೂರು ಯೂನಿಟ್ಸುಗಳಿವೆ. ಆ ಮೂರು ಯೂನಿಟ್ಸುಗಳಲ್ಲಿ ಅಯಾ ಯೂನಿಟ್ ಪ್ರಕಾರ ಅವರಿಗೆ ಸೀನಿಯಾರಿಟಿ ದೊರೆಯಬೇಕಾಗುತ್ತದೆ. ಇದರ ಬಗ್ಗೆ ಒಂದು ಕನ್ಸಾಲಿಡೇಟೆಡ್ ಲಿಸ್ಟನ್ನು ಮಾಡುವುದರಿಂದ ಅವರಲ್ಲಿ ದಕ್ಷರಾದ ಅಧಿಕಾರಿಗಳನ್ನು ಸೆಲೆಕ್ಟ್ ಮಾಡುತ್ತಾರೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಈಗ ತಾಲ್ಲೂಕ್‌ಬೋರ್ಡ್ ಹೈಸ್ಕೂಲ್‌ಸಿನಿಂದ ಮುನಿಸಿಪಲ್ ಹೈಸ್ಕೂಲುಗಳಿಗೆ ಅಲ್ಲಿನ ನೌಕರರನ್ನು ವರ್ಗಾವರ್ಗಿ ಮಾಡುತ್ತಾರೆ. ಅವರೆ ಮುನಿಸಿಪಲ್ ಹೈಸ್ಕೂಲ್‌ನಿಂದ ಸರ್ಕಾರದ ಹೈಸ್ಕೂಲುಗಳಿಗೆ ವರ್ಗವಾಡುತ್ತಾ ಇಲ್ಲ. ಆದ್ದರಿಂದ ಇದನ್ನು ಸರಿಪಡಿಸಿ ಯಾವಾಗ ಕಾರ್ಯರೂಪಕ್ಕೆ ತರುತ್ತೀರಿ ?

ಶ್ರೀ ಎ. ಆರ್. ಬದರೀನಾರಾಯಣ.—ಹಾಗೆ ಒಂದು ಯೂನಿಟ್ಟಿನಿಂದ ಇನ್ನೊಂದು ಯೂನಿಟ್ಟಿಗೆ ಟ್ರಾನ್ಸ್‌ಫರ್ ಮಾಡುವುದಕ್ಕಾಗುವುದಿಲ್ಲ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಹಾಗಾದರೆ ಅಲ್ಲಂದಲ್ಲಿಗೆ ಚೆಂಪೊರರಿಯಾಗಿಯಾದರೂ ವರ್ಗಾವಣೆ ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ಎ. ಆರ್. ಬದರೀನಾರಾಯಣ.—ಒಂದುವೇಳೆ ಅಲ್ಲಿ ಕೆಲಸಗಳು ಖಾಲಿ ಇದ್ದು ಇನ್‌ಕಂಬೆಂಟ್ಸ್ ಇಲ್ಲದೆ ಹೋದರೆ, ಆಗ ಚೆಂಪೊರರಿಯಾಗಿ ಸೀನಿಯಾರಿಟಿಯಲ್ಲಿ ಯಾರಿಗೂ ಅಫೆಕ್ಟ್ ಆಗದಹಾಗೆ ಕೆಲವರನ್ನು ನೇಮಿಸುವ ಹಾಗೆ ನೋಡಿಕೊಳ್ಳುತ್ತೇವೆ.

Conversion of Town Panchayats in Bellary District

249. Sri B. E. RAMAIAH (Siruguppa).—

Will the Minister for Community Development and Social Welfare be pleased to state.—

the number of Town Panchayats in Bellary District with a population of over 10,000 according to 1971 Census ; the action, if any, taken by the Government to convert them as Town Municipalities ?

Sri M. MALLIKARJUNA SWAMY (Minisiter for Community Development and Social Welfare).—

There are 10 Town Panchayats in Bellary District with a population of more than 10,000 according to 1971 Census figures.

Conversion of Town Panchayats into Municipalities is under active consideration of Government.

ಶ್ರೀ ಬಿ. ಇ. ರಾಮಯ್ಯ.—ಉತ್ತರದಲ್ಲಿ ಟೌನ್ ಪರಿಚಾಯತಿಗಳನ್ನು ಪುರಸಭೆಗಳನ್ನಾಗಿ ಪರಿವರ್ತಿಸುವ ವಿಷಯವು ಸರ್ಕಾರದವರು ಸಕ್ರಿಯ ಪರಿಶೀಲನೆಯಲ್ಲಿದೆ ಎಂಬುದಾಗಿ ಹೇಳಿದೆ. ಅಂದಮೇಲೆ ಎಷ್ಟು ದಿನಗಳು, ಸಮಯ ಅದಕ್ಕೆ ಬೇಕಾಗುತ್ತದೆ ?

†. ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—12-9-1972 ರಲ್ಲಿ ಸರ್ಕಾರದ ಪರವಾಗಿ ಮುನಿಸಿಪಲ್ ಮತ್ತು ಹೆರ್ತ್ ಡಿಪಾರ್ಟ್‌ಮೆಂಟಿನವರು ಅಲ್ಲಿನ ಡಿವಿಷನರ್ ಕಮಿಷನರ್ ಅವರಿಗೆ ಒಂದು ಆದೇಶವನ್ನು ಕೊಟ್ಟಿದ್ದಾರೆ: ಟೌನು ಪಂಚಾಯತಿಗಳಿರತಕ್ಕ ಪ್ರದೇಶಗಳಲ್ಲಿ 10 ಸಾವಿರ ಜನಗಳಿಗಿಂತ ಜಾಸ್ತಿಯಾಗಿ ಯಾವುದೇ ಹೆಡ್‌ಕ್ವಾರ್ಟರ್ಸ್‌ಗಳಲ್ಲಿದ್ದರೂ ಅವೆಲ್ಲವನ್ನೂ ನಗರಸಭೆಗಳಾಗಿ ಪರಿವರ್ತನೆ ಮಾಡಬೇಕೆಂದು ಆದೇಶವನ್ನು ಕೊಟ್ಟಿದ್ದಾರೆ. ಅದೇ ಪ್ರಕಾರ ಈಗಾಗಲೇ 49 ಟೌನ್ ಪಂಚಾಯತಿಗಳಿಗೆ ಪ್ರಿಲಿಮಿನರಿ ನೋಟಿಫಿಕೇಷನ್ ಕೊಟ್ಟಿದ್ದೇವೆ. ಈಗ ಫೈನರ್ ನೋಟಿಫಿಕೇಷನ್ ಕೂಡ ಆಗಿದೆ.

ಶ್ರೀ ಬಿ. ಇ. ರಾಮಯ್ಯ.—ಜೂನ್ 10ನೇ ತಾರೀಖಿನಲ್ಲಿ ಈ ಸರ್ಕಾರದಿಂದ ಒಂದು ನೋಟಿಫಿಕೇಷನ್ ಇಷ್ಯೂ ಆಗಿದೆ. ಇವತ್ತು ಫೆಬ್ರುವರಿ 20ನೇ ತಾರೀಖು. ಈಗ ಅದು ಯಾವ ಸ್ಟೇಜಿನಲ್ಲಿದೆ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಬಳ್ಳಾರಿ ಜಿಲ್ಲೆಗೆ ಸಂಬಂಧವಾಗಿ ಪೂರ್ಣವಾಗಿ ಇನ್ನೂ ಫೈನರ್ ನೋಟಿಫಿಕೇಷನ್ ಆಗಿಲ್ಲ.

ಶ್ರೀ ಬಿ. ಇ. ರಾಮಯ್ಯ.—ಅದು ಯಾವಾಗ ಆಗುತ್ತದೆ? ಈ ತಿಂಗಳಲ್ಲೋ ಅಥವಾ ಮಾರ್ಚ್ ತಿಂಗಳಲ್ಲೋ ಅಥವಾ ಇನ್ನೂ 4 ತಿಂಗಳು ಆಗುತ್ತದೋ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅದಕ್ಕೆ ನಾವೇನು ಪೀರಿಯಡ್ ಕೊಟ್ಟಿದ್ದೇವೋ ಆ ಟೈಮ್‌ನೊಳಗೆ ಆಗಬೇಕು. ಆದು ಆಗುತ್ತದೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಮುನಿಸಿಪಾಲಿಟಿಗಳು ಇರುವ ಕಡೆಗಳಲ್ಲಿ ಎಷ್ಟು ಸಾವಿರ ಜನಸಂಖ್ಯೆ ಇದ್ದರೆ ಅಷನ್ನು ಮುನಿಸಿಪಾಲಿಟಿಗಳೆಂದು ಪರಿಗಣಿಸಿದ್ದೀರಿ? ಒಂದುವೇಳೆ ನಿಮ್ಮ ನಿಯಮಕ್ಕಿಂತ ಕಡಿಮೆ ಜನಸಂಖ್ಯೆ ಇದ್ದರೆ, ಅದನ್ನೂ ಸಹ ಮುನಿಸಿಪಾಲಿಟಿ ಎಂಬುದಾಗಿ ಕರೆಯುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—10 ಸಾವಿರ ಜನಸಂಖ್ಯೆಯೊಳಗೇ ಇದ್ದರೆ ಅಂತಹ ನಗರ ಪಂಚಾಯತಿಗಳನ್ನು ನಾವು ನಗರಸಭೆಗಳಾಗಿ ಕನ್‌ವರ್ಟ್ ಮಾಡುವುದಿಲ್ಲ. 10 ಸಾವಿರ ಜನಸಂಖ್ಯೆಗಿಂತ ಜಾಸ್ತಿ ಇದ್ದರೆ ಮಾತ್ರ ಅಂತಹ ಟೌನ್ ಮುನಿಸಿಪಲ್ ಬೌಂಡರಿಗಳನ್ನು ನಗರಸಭೆಗಳಾಗಿ ಕನ್‌ವರ್ಟ್ ಮಾಡುತ್ತೇವೆ. ಆದರೆ ತಾಲ್ಲೂಕು ಹೆಡ್ ಕ್ವಾರ್ಟರ್‌ಗಳಲ್ಲಿ ಒಂದು ವೇಳೆ ಜನಸಂಖ್ಯೆ 10 ಸಾವಿರಕ್ಕಿಂತ ಕಡಿಮೆ ಇದ್ದರೆ, ಅವೆಲ್ಲವನ್ನೂ ಮುನಿಸಿಪಲ್ ಕೌನ್ಸಿಲ್ ಎಂಬುದಾಗಿ ಪರಿವರ್ತನೆ ಮಾಡಲಾಗುತ್ತದೆಂದು ಸರ್ಕಾರದ ತೀರ್ಮಾನಕ್ಕನುಸಾರವಾಗಿ ಅವರಿಗೆ ಆದೇಶವನ್ನು ಕೊಟ್ಟಿದೆ.

School Buildings for Harijan Students of Bijjala Village

256. Sri M. H. JAYAPRAKASH NARAYAN (Sirsi).—

Will the Minister for Community Development and Social Welfare be pleased to state.—

(*a*) whether it is a fact that Siddapur Taluk Board had taken a decision at its meeting held on 29-7-1971 to construct a school building for the Harijan students at Bijjala village by otilising the entire Government funds;

(*b*) the date on which the construction work of school building was entrusted to the contractor;

(*c*) whether it has come to the notice of the Government that there is no school building to the Harijan students and the